**ದಿನಾಂಕ : 16-03-2020 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ ಎಫ್.ಎಂ.ಎಂ. ವಕೀಲರಿಂದ :**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ನಿಜ ಇರುತ್ತವೆ. ಅವುಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅದರಲ್ಲಿ ನನ್ನ ಸಹಿ ಇರುತ್ತದೆ.

ನಾನು ನನ್ನ ವಾದಕ್ಕೆ ಪೂರಕವಾಗಿ

**1**. ವಾದಿಯು ನನ್ನ ಹೆಸರಿಗೆ ಬರೆದುಕೊಟ್ಟಿರುವ ಒಟ್ಟು ಮೂಕ್ತಿಯಾರ ಪತ್ರ ಹಾಜರು ಪಡಿಸಿದ್ದು, ಅದನ್ನು ನಿಪಿ **1** ಎಂದು ಗುರುತಿಸಲಾಯಿತು.

**2. 4** ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ **2** ರಿಂದ **5** ಎಂದು ಗುರುತಿಸಲಾಯಿತು.

**3. 3** ಎಂ.ಆರ್ ಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ **6** ರಿಂದ **8** ಎಂದು ಗುರುತಿಸಲಾಯಿತು.

**4.** ಜಮೀನಿನ ದಕ್ಕ ಖರೀದಿ ಪತ್ರದ ಪ್ರಮಾಣಿತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ **9** ಎಂದು ಗುರುತಿಸಲಾಯಿತು.

**5.** ನೋಟೀಸು ಹಾಜರು ಪಡಿಸಿದ್ದು, ಅದನ್ನು ನಿಪಿ **10** ಎಂದು ಗುರುತಿಸಲಾಯಿತು.

**6. 7** ಅಂಚೆ ರಸೀದಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ **11** ರಿಂದ **17** ಎಂದು ಗುರುತಿಸಲಾಯಿತು.

**7. 5** ಅಂಚೆ ತಲುಪು ಒಪ್ಪಿಗೆ ಪತ್ರಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ **18** ರಿಂದ **22** ಎಂದು ಗುರುತಿಸಲಾಯಿತು.

**8.** ಎರಡು ಅಂಚೆ ಲಕೋಟೇಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನಿಪಿ **23** ಮತ್ತು **24** ಎಂದು ಗುರುತಿಸಲಾಯಿತು.

**9.** ನೋಟೀಸು ಹಾಜರು ಪಡಿಸಿದ್ದು, ಅದನ್ನು ನಿಪಿ **25** ಎಂದು ಗುರುತಿಸಲಾಯಿತು.

**10.** ಖಾಲಿ ಅಂಚೆ ಲಕೋಟೆ ಹಾಜರು ಪಡಿಸಿದ್ದು, ಅದನ್ನು ನಿಪಿ **26** ಎಂದು ಗುರುತಿಸಲಾಯಿತು.

**11.** ನೋಟೀಸು ಹಾಜರು ಪಡಿಸಿದ್ದು, ಅದನ್ನು ನಿಪಿ **27** ಎಂದು ಗುರುತಿಸಲಾಯಿತು.

**12.** ಖಾಲಿ ಅಂಚೆ ಲಕೋಟೆ ಹಾಜರು ಪಡಿಸಿದ್ದು, ಅದನ್ನು ನಿಪಿ **28** ಎಂದು ಗುರುತಿಸಲಾಯಿತು.

**13.** ನನ್ನ ಗಂಡನ ಆರೋಗ್ಯದ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಹಾಜರು ಪಡಿಸಿರುತ್ತೆನೆ ಅದನ್ನು ನಿಪಿ-**29** ಎಂದು ಗುರುತಿಸಲಾಯಿತು.

**14.** **1** ರಿಂದ **6** ನೇ ಪ್ರತಿವಾದಿಯರು ಬರೆದುಕೊಟ್ಟಿರುವ ಖರೀದಿ ಕರಾರು ಪತ್ರ ಹಾಜರು ಪಡಿಸಿರುತ್ತೇನೆ. ಈ ಹಂತದಲ್ಲಿ **7** ನೇ ಪ್ರತಿವಾದಿ ಪರ ವಕೀಲರು ವಾದಿ ಆಧರಿಸಿದ ಕರಾರು ಪತ್ರವು ಸರಿಯಾದ ಸ್ಟಾಂಪ್ ಮೇಲೆ ಬರೆಯಲ್ಪಟ್ಟಿಲ್ಲವೆಂದು ವಾದವನ್ನು ಮಂಡಿಸಿ ಸದರಿ ದಾಖಲೆಯನ್ನು ವಾದಿಯ ಪರವಾಗಿ ನಿಶಾನೆಯಾಗಿ ಗುರುತಿಸಿಕೊಳ್ಳಬಾರದೆಂದು ತಕರಾರು ಮಾಡಿರುತ್ತಾರೆ. ಸದರಿ ಈ ಅಂಶದ ಬಗ್ಗೆ ಉಭಯ ಪಕ್ಷಗಾರರಿಂದ ವಾದ ಆಲಿಸುವುದು ಅಗತ್ಯವಾಗಿದ್ದರಿಂದ ಪ್ರಕರಣವನ್ನು ಮುಂದೂಡಲಾಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೆ.ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.